# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 144 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆ ವ್ಯಾಪ್ತಿಗೆ ಬರುವ ಉದ್ಯಮಗಳಾವುವು; ಸಂಪೂರ್ಣ ಮಾಹಿತಿ ನೀಡುವುದು; | ಭಾರತ ಸರ್ಕಾರವು ದಿನಾಂಕ: 01.07.2020 ರಿಂದ ಜಾರಿಗೆ ತಂದಿರುವ ಹೊಸ ವ್ಯಾಖ್ಯಾನದ ಪ್ರಕಾರ ಯಂತ್ರೋಪಕರಣ ಮತ್ತು ಸ್ಥಾವರಗಳಲ್ಲಿ ಒಟ್ಟು ಬಂಡವಾಳ ರೂ.10 ಕೋಟಿ ಮೀರದಂತೆ ಹೂಡಿಕೆ ಮಾಡಿರುವ ಮತ್ತು ವಾರ್ಷಿಕ ವಹಿವಾಟು ರೂ.50 ಕೋಟಿ ಮೀರದಂತೆ ಇರುವ ಉತ್ಪಾದನಾ ಮತ್ತು ಸೇವಾ ಚಟುವಟಿಕೆಯ ವಲಯದ ಉದ್ಯಮಗಳನ್ನು ಸಣ್ಣ ಕೈಗಾರಿಕೆ ಎನ್ನುತ್ತಾರೆ.<br><br>ಕೈಗಾರಿಕಾ ಚಟುವಟಿಕೆಯನ್ನು ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳನ್ನಾಗಿ ವರ್ಗೀಕರಿಸಲಾಗಿದ್ದು, ಉತ್ಪಾದನಾ ವಲಯದ ಕೈಗಾರಿಕಾ ಚಟುವಟಿಕೆಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.<br><br>1. ಕೃಷಿ ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳು<br>2. ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಗಳು<br>3. ಇಂಜಿನಿಯರಿಂಗ್ ಕೈಗಾರಿಕೆಗಳು<br>4. ಆಟೋಮೊಬೈಲ್ ಕೈಗಾರಿಕೆಗಳು<br>5. ರಾಸಾಯನಿಕ ಕೈಗಾರಿಕೆಗಳು<br>6. ಔಷಧ ಮತ್ತು ಜೈವಿಕ ತಂತ್ರಜ್ಞಾನ ಕೈಗಾರಿಕೆಗಳು<br>7. ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು<br>8. ಪ್ಲಾಸ್ಟಿಕ್ ಆಧಾರಿತ ಕೈಗಾರಿಕೆಗಳು<br>9. ಕರಕುಶಲ ಉತ್ಪನ್ನ ಕೈಗಾರಿಕೆಗಳು<br>10. ಸ್ಟೀಲ್ ಮತ್ತು ಐರನ್ ಕೈಗಾರಿಕೆಗಳು<br>11. ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಕೈಗಾರಿಕೆಗಳು |
| ಆ) | ಸಣ್ಣ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ಯಮಗಳು, ಸೊಸೈಟಿಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಯಾವುವು; | ಸಣ್ಣ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ಯಮಗಳು, ಸೊಸೈಟಿಗಳು, ಹಾಗೂ ಇತರೆ ಅಂಗ ಸಂಸ್ಥೆಗಳ ವಿವರಗಳು ಈ ಕೆಳಗಿನಂತಿವೆ:<br><br>1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು<br>2. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು<br>3. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು<br>4. ಕರ್ನಾಟಕ ರಾಜ್ಯ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು<br>5. ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು<br>6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು<br>7. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು |
| ಇ) | ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕೆ ಘಟಕಗಳು ಪ್ರಾರಂಭವಾಗಿ ಕಾರ್ಯಚರಣೆಯಲ್ಲಿವೆ; ಇವುಗಳಿಗೆ ಸರ್ಕಾರ ವಿಧಿಸಿರುವ ಮಾನದಂಡಗಳೇನು? (ಮಾಹಿತಿ ಒದಗಿಸುವುದು) | ಭಾರತ ಸರ್ಕಾರದ 'ಉದ್ಯಮ' ರಿಜಿಸ್ಟ್ರೇಷನ್ ಪೋರ್ಟಲ್ ದಿ: 24.11.2023 ರವರೆಗೆ ಕರ್ನಾಟಕ ರಾಜ್ಯದಲ್ಲಿ ಒಟ್ಟು 36,179 ಸಣ್ಣ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ.<br><br>ರಾಜ್ಯದಲ್ಲಿ ಸಣ್ಣ ಉದ್ಯಮಗಳನ್ನು ತೆರೆಯಲು ಉದ್ಯಮಶೀಲರು ಕನಿಷ್ಟ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸಬೇಕಾಗುತ್ತದೆ:<br><br>1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ" |

| | | |
|---|---|---|
| | | ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.<br>2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವ "ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ.<br>3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ.<br>4. ಉದ್ಯಮಶೀಲರು ನಿವೇಶನದ ಹಂಚಿಕೆ ಆದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್ / ಕೆ.ಎಸ್.ಎಫ್.ಸಿ ಗೆ ಯೋಜನಾ ವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.<br>5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ / ಸ್ಥಳೀಯ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.<br>6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ.<br>7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ.<br>8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ.<br>9. ಚಟುವಟಿಕೆ / ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ.<br>10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ.<br>11. ಕಾರ್ಮಿಕರ ಸಂಖ್ಯೆ 20ಕ್ಕೂ ಹೆಚ್ಚಾದಲ್ಲಿ, ಇ.ಎಸ್.ಐ / ಪಿ.ಎಫ್ / ವೃತ್ತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ.<br>12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೊಂದಣಿ ಪಡಯಬೇಕಾಗುತ್ತದೆ.<br>13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ" ರಹದಾರಿಯನ್ನು ಪಡೆಯಬೇಕಾಗುತ್ತದೆ.<br>14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಫೈರ್ ಸೇಫ್ಟಿ ಪ್ರಮಾಣಪತ್ರ" ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ.<br>15. ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ. |

ಸಿಐ 227 ಸಿಎಸ್‌ಸಿ 2023

(ಶರಣಬಸಪ್ಪ ದರ್ಶನಾಪೂರ)
ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು